ಎನ್. ಪ್ರಕಾಶ್, ದೇವನಹಳ್ಳಿ
*ಶಾಂತಿಪ್ರಿಯ ರಾಷ್ಟ್ರವಾದ ಭಾರತ ಹುಲಿಯನ್ನು ರಾಷ್ಟ್ರಪ್ರಾಣಿಯನ್ನಾಗಿ ಆರಿಸಿಕೊಂಡಿರುವುದೇಕೆ?*



ಪುಣ್ಯಕೋಟಿ ಸತ್ಯ ನುಡಿದುದಕ್ಕೆ ಹುಲಿ ನೆಗೆದು ಬಿದ್ದು ಸತ್ತಿತಲ್ಲಾ... ಸತ್ಯ ಕಂಡ್ರೆ ಸತ್ಯವಾಗ್ಲೂ ಸಾಯೋ ಪ್ರಾಣಿ ಆದ್ರಿಂದ್ಲೇ ಅದು ನಮ್ಮ ರಾಷ್ಟ್ರಪ್ರಾಣಿ!

ಬಡಯ್ಯ ಕೊಂಡ್ಲರ್, ಹೊಳಲ್ಕೆರೆ
*ಭ್ರಷ್ಟಾಚಾರದ ವಿರುದ್ಧ ಮಾಜಿ ಮುಖ್ಯಮಂತ್ರಿಗಳು ಧರಣಿ ನಡೆಸುವ ನೈತಿಕ ಹಕ್ಕು ಇದೆಯೆ?*
ಛೆ! ನೈತಿಕತೆಗೂ, ಮಂತ್ರಿಗೂ ಏನು ಸಂಬಂಧ ಸ್ವಾಮಿ?

ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ
*ರಾಮ್, ನಿನ್ನ ನಿಜವಾದ ಹೆಸರನ್ನು ತಿಳಿಯಲು ಕಡೆಯ ಅಸ್ತ್ರವಾಗಿ ಒಳ್ಳೆಯ ಕವಡೆ ಶಾಸ್ತ್ರದವರ ತಲಾಶ್‌ನಲ್ಲಿದ್ದೇನೆ; ಗುರ್ರ‍ೆನ್ನದೆ ದಾರಿ ತೋರುವೆಯಾ ಗುರು?*
ಬರೆದುಕೊಳ್ಳಿ ಕವಡೆ ಪಂಡಿತ್, ಕೇರ್ ಆಫ್ ಎಡ್ಯೂರಪ್ಪ, ಗಣಿ ನಿಲಯ, ಪರಪ್ಪನ ಅಗ್ರಹಾರ, ಬೆಂಗಳೂರು.

ಎಸ್. ಶ್ರೀಧರ್, ಬೆಂಗಳೂರು
*ಬದುಕಿನ ಬ್ಯಾಂಕಿನಲ್ಲಿ ಪ್ರೀತಿ ಡಿಪಾಸಿಟ್ ಆಗಲು ಏನು ಮಾಡಬೇಕು?*
ಕರಕರೆ, ಕರೆನ್ಸಿ ಎರಡೂ ಚೆನ್ನಾಗಿರಬೇಕು!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅಲ್ರಪ್ಪಾ, ಪೋಲಿ ಟ್ರಿಕ್ಸ್‌ಗೂ, ಪಾಲಿಟಿಕ್ಸ್‌ಗೂ ಏನಾದರೂ ಸಂಬಂಧವಿದೆಯೇನಪ್ಪಾ...?*




ಹಾಲಪ್ಪ, ರೇಣುಕಾಚಾರ್ಯನನ್ನು ಕಂಡೂ ಈ ಪ್ರಶ್ನೆ ಕೇಳುವುದು ಅಗತ್ಯವೇ? ಅಕಟಕಟಾ!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ
*ಕೊಲೆಪಾತಕರಿಗೆ ತಮ್ಮ ಅಂತ್ಯದ ಅರಿವು ಇರುವುದಿಲ್ಲವೇ?*
ಇರಲು ಹೇಗೆ ಸಾಧ್ಯ? ಕಸಬ್‌ನಂತಹವನೇ ತನ್ನ ಷಷ್ಟ್ಯಬ್ದಿ ಪಾರ್ಲಿಮೆಂಟ್‌ನಲ್ಲಿ ಆಚರಿಸಿಕೊಳ್ಳಬಲ್ಲಂತಹ ಕಾನೂನು ವ್ಯವಸ್ಥೆ ನಮ್ಮದು!

ಕೆ.ಎನ್. ನಾರಾಯಣರೆಡ್ಡಿ, ಕೆಜಿಎಫ್
*ವಿವಾಹಿತ ಮಹಿಳೆ ಬೆಳಿಗ್ಗೆ ಎದ್ದ ಕೂಡಲೆ ಮಾಂಗಲ್ಯವನ್ನು ಕಣ್ಣಿಗೊತ್ತಿ ಕೊಳ್ಳುವಳಲ್ಲಾ, ಕಾರಣವೇನು?*
ರೇಟ್ ಜಾಸ್ತಿ ಇರೋದೆಲ್ಲಾ ಗ್ರೇಟ್ ಆದ್ರಿಂದ!

ಎನ್.ಎ.ರಾಘವೇಂದ್ರ, ಕತ್ತರಗುಪ್ಪ
*ಓಟಗಾರರಿಗೆ, ಆಟಗಾರರಿಗೆ, ಮಾತುಗಾರರಿಗೆ ಪ್ರಶಸ್ತಿ ದೊರಕಿದಂತೆ ಉತ್ತರಭೂಪರಾದ ತಮಗೇಕೆ ಪ್ರಶಸ್ತಿ ದಕ್ಕಿಲ್ಲ?*
ಅವರದೆಲ್ಲಾ ಒಂದು ದಿನದ ಪ್ರಶಸ್ತಿ; ನನಗೆ ನಿಮ್ಮ ಮೆಚ್ಚುಗೆಯ ನಗೆಯ ಪ್ರಶಸ್ತಿ ವಾರವಾರವೂ ದೊರಕುತ್ತಿದೆ!

ಎ.ಎಸ್. ಸ್ವಾಮಿ, ಶೋರಾಪುರ
*ಹೆರಿಗೆಗೂ, ತೆರಿಗೆಗೂ ಇರುವ ವ್ಯತ್ಯಾಸವೇನು?*
ಕರುಳಬಳ್ಳಿ ಕೀಳುವುದು ಹೆರಿಗೆ, ಕರುಳನ್ನೇ ಕೀಳುವುದು ತೆರಿಗೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಸ್ವಾತಂತ್ರ್ಯಪೂರ್ವದಲ್ಲಿ ಸೆರೆಗೆ ಹೋಗುತ್ತಿದ್ದ ನಾಯಕರಿಗೂ, ಈಗ ಜೈಲಿಗೆ ಹೋಗುತ್ತಿರುವ ನಾಯಕರಿಗೂ ಏನು ವ್ಯತ್ಯಾಸ?*
ಅವರು ಲೀಡರ್‌ಗಳು; ಇವರು ಡೀಲರ್‌ಗಳು!

ಕಾ. ಪ್ರಕಾಶ್, ಕನಕಪುರ
*ಕಳೆದುಕೊಂಡ ಆ ದಿನಗಳು ಮತ್ತೆ ದೊರೆತರೆ?*
ಬಂದೇ ಬರುತ್ತದೆ! 2,191 ದಿನಗಳು (6ವರ್ಷಗಳು), 4,018ದಿನಗಳು (11ವರ್ಷಗಳು), 4,382ದಿನಗಳು (12ವರ್ಷಗಳು), 10,227ದಿನಗಳು (28ವರ್ಷಗಳು) ಅಥವಾ 14,609ದಿನಗಳಲ್ಲಿ (40ವರ್ಷಗಳು) ಅವೇ ದಿನಗಳು ಬರುತ್ತವೆ. ಬೇಕಿದ್ದರೆ ಈ ಅಂತರದ ಕ್ಯಾಲೆಂಡರ್‌ಗಳನ್ನು ಗಮನವಿಟ್ಟು ನೋಡಿ!

ಗಾಯತ್ರಿ, ರಾಜಾಜಿನಗರ
*ಆಳಾದವ ಅರಸಾದ, ಅರಸನಂತೆ ಮೆರೆದವ ಜೈಲುಪಾಲಾದನಲ್ಲ ಗುರು...?*
ಇವೆಲ್ಲಾ ದಸರಾದಂತೆ; ಹತ್ತುದಿನಗಳ ನಂತರ ಪಟ್ಟದಬೊಂಬೆಗೆ ಪೆಟ್ಟಿಗೆ, ಮುಕ್ಕಾದ ಬೊಂಬೆ ತೊಟ್ಟಿಗೆ!

ಎಂ.ಆರ್. ಪವನ್‌ಕುಮಾರ್, ಬಳ್ಳಾರಿ
*ಜಮೀನಿಗೂ, ಜಾಮೀನಿಗೂ ಇರುವ ವ್ಯತ್ಯಾಸವೇನು?*
ಎಡೆ ಊರಿದರೆ ಜಮೀನು; ಎಡವಟ್ಟಾದರೆ ಜಾಮೀನು!

## ಬಹುಮಾನಿತ ಪ್ರಶ್ನೆ

ಎಂ.ಜಿ. ಶಿವರಾಂ, ಬೆಂಗಳೂರು
*ಮಾಜಿ ಮಂತ್ರಿಗಳು ಜೈಲಿನಲ್ಲಿರುವುದನ್ನು ಕಂಡಾಗ ನಿಮಗೆ ಏನೆನ್ನಿಸುತ್ತದೆ?*
ಅಕಟಕಟಾ... ಜೈಲಿಗೇ ಮೈಲಿಗೆ!

ಜಿ. ಕಾಂತರಾಜು, ಗೌರಿಬಿದನೂರು
*ಮನುಷ್ಯ ಅಥವಾ ಪ್ರಾಣಿಗಳಿಗೆ ಪುನರ್ಜನ್ಮವಿದೆಯೇ?*
ಖಂಡಿತ; ಹಾವು-ಮುಂಗಸಿಗಳು ಅತ್ತೆ-ಸೊಸೆಯರಾಗುತ್ತವೆ, ತಿಗಣೆಗಳು ಕಾರ್ಪೊರೇಷನ್ ನೌಕರರಾಗುತ್ತವೆ, ಜಿಗಣೆಗಳು ಮಂತ್ರಿಗಳಾಗುತ್ತವೆ, ಕಂತ್ರಿನಾಯಿಗಳು ಭಿನ್ನಮತೀಯರಾಗುತ್ತವೆ!

ಎಸ್.ಜಿ. ಕರನಂದಿ, ಹುನಗುಂದ
*ಜನಲೋಕಪಾಲ ಕಾಯ್ದೆ ಬಂದುಬಿಟ್ಟರೆ ಭ್ರಷ್ಟಾಚಾರ ತೊಲಗುವುದೆ?*
ಪೊರಕೆ ಕೊಂಡಾಕ್ಷಣ ಕಸ ಮಾಯವಾಗುವುದೇ? ಕಸ ಬೀಳುತ್ತಲೇ ಇರುತ್ತದೆ, ನಾವು ಗುಡಿಸುತ್ತಲೇ ಇರಬೇಕು!

ಸ್ನೇಹಾ ಶ್ರೀನಾಥ್, ಬೆಂಗಳೂರು
*ಇಂದಿನ ಸಮಾಜದಲ್ಲಿ ಪ್ರಜ್ಞಾವಂತ ನಿಷ್ಠುರವಾದಿಗಳು ಯಾವ ಬಣಕ್ಕೆ ಸೇರುತ್ತಾರೆ ಸ್ವಾಮಿ?*




ವಿನಾಶದ ಅಂಚಿನಲ್ಲಿರುವ ಪ್ರಾಣಿಗಳ ಬಣಕ್ಕೆ!

ಎನ್.ಡಿ. ವೆಂಕಟಸುಬ್ಬು, ಮೈಸೂರು
*ಮನೆಹಾಳು ಬುದ್ಧಿ ಕಲಿಯಬೇಕೆಂದಿದ್ದೇನೆ, ಯಾವ ಟಿವಿ ಧಾರವಾಹಿಯನ್ನು ರೆಕಮೆಂಡ್ ಮಾಡುತ್ತೀರಿ?*
ಮುಕ್ತ ಮುಕ್ತ! ಅದರಲ್ಲಿ ಪ್ರತಿ ಅಪರಾಧವನ್ನೂ ಚೆನ್ನಾಗಿ ವಿವರಿಸುವುದರಿಂದ ಕಲಿಯಲು ಸುಲಭ!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ಮೌನರಾಗಕ್ಕೂ, ಸಂಧ್ಯಾರಾಗಕ್ಕೂ ಇರುವ ಅಂತರವೇನು?*
ಕಂಠ ಬಿಗಿದಾಗ ಮೌನರಾಗ, ಕಂಠ ಬಿಚ್ಚಿ ಹಾಡಿದಾಗ ಸಂಧ್ಯಾರಾಗ!

■ ರಾಮ್